

ಸಂಪಾದಕೀಯ

# ಸಾಕ್ಷಾತ್ಕಾರ ಹಾಗೂ ಸಾರ್ಥಕತೆ

**ಮಾ**ನವ ಎಲ್ಲಿಂದ ಬಂದ? ಎಲ್ಲಿಗೆ ಹೋಗುತ್ತಾನೆ? ಮಾನವ ಜೀವನದ ಉದ್ದೇಶವೇನು? ಈ ಜೀವನಕ್ಕೆ ಅರ್ಥ ವಿದೆಯೆ? ಅಂತಿಮವಾಗಿ ನಮ್ಮ ಗುರಿಯೇನು? — ಈ ಪ್ರಶ್ನೆಗಳು ಇಂದು ನಿನ್ನೆಯದಲ್ಲ. ಅತ್ಯಂತ ಪ್ರಾಚೀನ ಕಾಲದಿಂದಲೇ ಈ ಪ್ರಶ್ನೆಗಳು ಹುಟ್ಟಿವೆ; ಇವುಗಳಿಗೆ ಉತ್ತರ ಕಂಡುಕೊಳ್ಳುವ ಪ್ರಯತ್ನಗಳೂ ನಡೆದಿವೆ. ಆದರೆ ಇದೇ ನಿಜವಾದ ಉತ್ತರವೆಂದು ಯಾರಿಗೂ ಹೇಳಲಾಗಿಲ್ಲ. ಒಬ್ಬ ಕಂಡುಕೊಂಡ ಉತ್ತರವನ್ನು ಇನ್ನೊಬ್ಬ ಅಲ್ಲಗಳೆಯುತ್ತಾನೆ. ತತ್ತ್ವಶಾಸ್ತ್ರಜ್ಞರು, ವಿಜ್ಞಾನಿಗಳು, ಚಿಂತಕರು, ಮೇಧಾವಿಗಳು ಈ ಕುರಿತು ಆಳವಾಗಿ ಚಿಂತಿಸುತ್ತಲೇ ಇದ್ದಾರೆ. ಬಹುಶಃ ಶ್ರೀರಾಮಕೃಷ್ಣರು ಹೇಳಿದ, 'ಭಗವಂತನ ಸಾಕ್ಷಾತ್ಕಾರವೇ ಮಾನವ ಜೀವನದ ಉದ್ದೇಶ' ಎಂಬ ಹೇಳಿಕೆಯೊಂದೇ ಅತ್ಯಂತ ಸಮಗ್ರವೂ, ಮಾನವ ಕುಲವನ್ನು ಒಳಗೊಂಡ ಸಮಸ್ತ ಸೃಷ್ಟಿಯನ್ನೇ ವ್ಯಾಪಿಸುವಷ್ಟು ವಿಸ್ತಾರವಾಗಿರುವಂತೆಯೂ ಕಂಡುಬರುತ್ತದೆ. ಈ ಕುರಿತು ನಾಸ್ತಿಕರು, ಭೌತಿಕ ಜಗತ್ತಿಗಷ್ಟೇ ತಮ್ಮ ಅರಿವನ್ನು ಸೀಮಿತಗೊಳಿಸಿಕೊಂಡವರು ತಕರಾರು ಎತ್ತಬಹುದು; ಆದರೆ ಶ್ರೀರಾಮಕೃಷ್ಣರಲ್ಲಿ ಈ ಕುರಿತು ಯಾವುದೇ ಸಂದೇಹವಿರಲಿಲ್ಲ. ಸ್ವತಃ ಅನುಭವದಿಂದ ಕಂಡುಕೊಂಡ ಆಧ್ಯಾತ್ಮಿಕ ಸತ್ಯಗಳ ಆಧಾರದಿಂದ ಹೇಳಿದ ಅವರ ಮಾತಿಗೆ ಸಾಮಾನ್ಯ ಗ್ರಹಿಕೆಯನ್ನು ಮೀರಿದ ಮಹತ್ವವಿದೆ. ಅವರ ಮಾತಿನ ತೂಕವನ್ನು ಅಳೆಯುವವನಿಗೆ ತನ್ನ ಅಳತೆಗೋಲು ಹಾಗೂ ತನ್ನ ಅಳೆಯುವ ಸಾಮರ್ಥ್ಯ ಎಷ್ಟರಮಟ್ಟಿಗಿದೆ ಎಂದು ಮೊದಲು ತಿಳಿದುಕೊಳ್ಳುವ ಅಗತ್ಯವಿದೆ. 'ನಾನೇರುವೆತ್ತರಕೆ ನೀನೇರಬಲ್ಲೆಯಾ?' ಎಂಬ ಕವಿವಾಣಿಯಂತೆ, ಅವತಾರ ಪುರುಷರ ನುಡಿಗಳನ್ನು ಬೇರೆಯೇ ಉನ್ನತ ಹಂತದಿಂದ ಅರಿಯುವ ಪ್ರಯತ್ನ ಮಾಡಬೇಕು; ಆದರೂ ಅವರ ನುಡಿಗಳನ್ನು 'ಅಳೆಯುವ' ಮಾತು ಉದ್ಧಟತನದ್ದಾದೀತು.

## ಸಾಕ್ಷಾತ್ಕಾರವೇ ಧರ್ಮ

ಮಾನವನ ಗುರಿಯನ್ನು ಕಂಡುಕೊಳ್ಳುವ ಪ್ರಯತ್ನದಲ್ಲಿ ಸಾವಿರಾರು ವರ್ಷಗಳ ಕಾಲಾವಧಿಯ ಚಿಂತನ-ಮಂಥನಗಳಿಂದ, ತರ್ಕ-ಸಾಧನೆ-ಅನುಭೂತಿಗಳಿಂದ ಯಾರೋ ಕೆಲವು ಮಂದಿ ಮಹಾತ್ಮರು ಕಂಡುಕೊಂಡ ಅಲೌಕಿದ ಅನುಭವಗಳನ್ನು ಆಧರಿಸಿಯೇ ಎಲ್ಲ ಧರ್ಮಗಳೂ ಹುಟ್ಟಿ ಬೆಳೆದಿವೆ. ಆದ್ದರಿಂದ, ಅನುಭವವೇ ಧರ್ಮಗಳ ತಳಹದಿ ಎಂದು ಸ್ವಾಮೀಜಿ ಹೇಳುತ್ತಾರೆ. ಎಂತಹ ಅನುಭವ? ಈ ಲೋಕವನ್ನು ಮೀರಿದ, ಮಾನವನ ಅರಿವಿನ ಮಿತಿಯನ್ನು ದಾಟಿದ ಆಧ್ಯಾತ್ಮಿಕ ಅನುಭವ. ಸತ್ಯ, ಭಗವಂತ, ಆತ್ಮ, ಬ್ರಹ್ಮ — ಎಂದೆಲ್ಲ ಕರೆಯಲ್ಪಟ್ಟ ಒಂದು ಅತೀತ ವಸ್ತುವನ್ನು ಸಾಕ್ಷಾತ್ತಾಗಿ ಕಂಡುಕೊಂಡಾಗ ಉಂಟಾದ ಅಂಥ ಅನುಭವಗಳನ್ನು ಆಧರಿಸಿ ಎಲ್ಲ ಧರ್ಮಗ್ರಂಥಗಳು, ಧಾರ್ಮಿಕ-ಆಧ್ಯಾತ್ಮಿಕ ಪರಂಪರೆಗಳು ಬೆಳೆದು ಬಂದವು. ಇವುಗಳ ಪ್ರಭಾವವು ಸಮಾಜದ ಮೇಲೆ ಎಷ್ಟೊಂದು ಗಾಢವಾಗಿ ಉಂಟಾಯಿತೆಂದರೆ, ಇಡೀ ಸಮಾಜ ಹಾಗೂ ಮಾನವನ ಜನಜೀವನದ ಮೇಲೆ ಅವು ಅಚ್ಚಳಿಯದ ಮುದ್ರೆಯನ್ನೊತ್ತಿ, ಹಲವು ತಲೆಮಾರುಗಳ ಮೂಲಕ ಅವು ಹರಿದುಬರುವಂತಾಯಿತು. ಹೀಗೆ ರೂಪುಗೊಂಡ ಜೀವನಪದ್ಧತಿಯನ್ನೇ ಪ್ರಪಂಚದ ಎಲ್ಲ ಸಂಸ್ಕೃತಿಗಳಲ್ಲಿ ನಾವು ಕಾಣುತ್ತೇವೆ. ಈ ಕಾರಣದಿಂದ ಧರ್ಮವೇ ಸಂಸ್ಕೃತಿಯ ತಿರುಳೆಂದು ನಾವು ಪರಿಗಣಿಸಬಹುದಾಗಿದೆ.

ವೈಯಕ್ತಿಕವಾಗಿ ಉಂಟಾಗಿರುವ ಆಧ್ಯಾತ್ಮಿಕ ಅನುಭವ ಅಥವಾ ಸಾಕ್ಷಾತ್ಕಾರದ ಅನುಭವಗಳು ಒಟ್ಟು ಸಮಾಜವನ್ನೇ ಆ ಸಾಕ್ಷಾತ್ಕಾರದತ್ತ ಸಾಗುವಂತೆ ಮಾಡುವಲ್ಲಿ ಪ್ರಭಾವ ಬೀರುತ್ತವೆ. ಹೀಗೆ ಪ್ರಭಾವ ಬೀರುವಾಗ, ವೈಯಕ್ತಿಕ ವಿವರಗಳು, ವಿಧಾನಗಳು ಸಾರ್ವತ್ರಿಕವಾಗಿ ಮಾರ್ಪಾಡು ಹೊಂದಬೇಕಾಗುತ್ತವೆ. ಈ

ಪ್ರಕ್ರಿಯೆಯ ವಿವಿಧ ಹಂತಗಳಲ್ಲಿ ಹತ್ತುಹಲವು ಸಾಧನೆಯ ವಿಧಾನಗಳು, ಅವುಗಳನ್ನನುಸರಿಸಿ ವಿವಿಧ ಮತ, ಪಂಥಗಳು ರೂಪುಗೊಳ್ಳುತ್ತವೆ. ಎಲ್ಲರಿಗೂ ಏಕರೂಪದ ವಿಧಾನ, ಧಾರ್ಮಿಕ ರೀತಿನೀತಿಗಳು ರೂಪುಗೊಂಡ ಧರ್ಮಗಳೂ ಇವೆ; ಆದರೆ ಭಾರತದಂತೆ ಎಲ್ಲ ವೈವಿಧ್ಯಗಳ ನಡುವೆಯೂ ಒಂದು ಏಕ ಸೂತ್ರತೆಯನ್ನು ಕಂಡುಕೊಂಡು, ಧಾರ್ಮಿಕ ಸ್ವಾತಂತ್ರ್ಯವನ್ನು ನೀಡಿ, ವಿವಿಧ ಮನೋಭಾವದ, ಸ್ವಭಾವದ ಜನರಿಗೆ ವಿಭಿನ್ನ ರೀತಿಯ ಸಾಧನೆಗೆ ಅವಕಾಶ ಒದಗಿಸಿರುವುದು ಬೇರೆಲ್ಲೂ ಕಂಡುಬಂದಿಲ್ಲ ಎಂಬುದು ಸತ್ಯ. ಒಟ್ಟಿನಲ್ಲಿ, ಹೊಸದಾಗಿ ಜನ್ಮ ತಳೆದ ಮಗು ವಿವಿಧ ಹಂತಗಳಲ್ಲಿ ಧಾರ್ಮಿಕ-ಆಧ್ಯಾತ್ಮಿಕ ವಿಚಾರ ಗಳನ್ನು ಮೈಗೂಡಿಸಿಕೊಂಡು, ಸಾಕ್ಷಾತ್ಕಾರದತ್ತ ಮುನ್ನಡೆಯುವ ಹಾಗೆ ಮಾಡುವ ಒಂದು ಸನ್ನಿವೇಶವನ್ನು ಸಮಾಜ ಸೃಷ್ಟಿಸಬೇಕು; ಅದೇ ಸಂಸ್ಕೃತಿ-ಧರ್ಮಗಳ ಕೊಡುಗೆ. ಈ ದೃಷ್ಟಿಯಿಂದ ನೋಡುವಾಗ, ನಮ್ಮ ದೇಶ 'ಸಾಕ್ಷಾತ್ಕಾರವೇ ಧರ್ಮ' ಎಂಬ ಧ್ಯೇಯವನ್ನು ಅತ್ಯಂತ ಸಮರ್ಪಕವಾಗಿ ಯುಗ ಯುಗಾಂತರಗಳಿಂದಲೂ ಮೈಗೂಡಿಸಿಕೊಂಡು ಬಂದಿದೆ.

### ಸಾಕ್ಷಾತ್ಕಾರದ ಅನುಭವ

ಧರ್ಮಗಳ ತಿರುಳಾದ ಸಾಕ್ಷಾತ್ಕಾರದ ಅನುಭವವೆಂಥದು? ಈಗಾಗಲೇ ಗಮನಿಸಿರುವಂತೆ, ಸಾಕ್ಷಾತ್ಕಾರ ಹಾಗೂ ಆಧ್ಯಾತ್ಮಿಕ ಅನುಭವಗಳು ಸಂಪೂರ್ಣವಾಗಿ ವೈಯಕ್ತಿಕ. ವೈಜ್ಞಾನಿಕ ಅನ್ವೇಷಣೆಗಳಂತೆ ಇದನ್ನು ಪ್ರಯೋಗಾಲಯದಲ್ಲಿ ಪರೀಕ್ಷೆ ಮಾಡಿ ತೋರಿಸಿಕೊಡಲಾಗುವುದಿಲ್ಲ; ವ್ಯಕ್ತಿಯೊಬ್ಬನು ತನಗಾದ ಅನುಭವಗಳನ್ನು ಇನ್ನೊಬ್ಬನ ಮುಂದೆ ಕೇವಲ ಹೇಳಿಕೊಳ್ಳಬಹುದು, ಅಷ್ಟೆ. ಆದ್ದರಿಂದ ಅಂಥ ವ್ಯಕ್ತಿಯ ವ್ಯಕ್ತಿತ್ವವನ್ನು ನೋಡಿಕೊಂಡು ಅವನ ಅನುಭವ ಎಷ್ಟರಮಟ್ಟಿಗೆ ಸತ್ಯ ಎಂದು ಇತರರು ನಂಬಬೇಕಾಗಿದೆ. ಆದಕಾರಣ, ಆಧ್ಯಾತ್ಮಿಕ ಅನುಭವಗಳನ್ನು ಸಾರ್ವತ್ರಿಕವಾಗಿ ಪ್ರಮಾಣೀಕರಿಸಲಾಗುವುದಿಲ್ಲ. ನಮ್ಮ ಪರಂಪರೆಯಲ್ಲಿ ಪ್ರಮಾಣಗಳ ವಿಚಾರ ಬಂದಾಗ ಪ್ರತ್ಯಕ್ಷ, ಅನುಮಾನ ಪ್ರಮಾಣಗಳಿಗಿಂತಲೂ 'ಶಬ್ದ' ಪ್ರಮಾಣವೇ ನಿಜವಾದ ಪ್ರಮಾಣವೆಂದು ಪರಿಗಣಿಸಲು ಇದೇ ಕಾರಣ. 'ಶಬ್ದ' ಎಂದರೆ ವೇದಗಳ ಅಥವಾ ಮಹಾಪುರುಷರ ಮಾತುಗಳು. ಯಾರು ಪರಬ್ರಹ್ಮನ ಸಾಕ್ಷಾತ್ಕಾರ ಪಡೆದಿದ್ದಾರೋ ಅವರ ಮಾತುಗಳೇ ಅಂತಿಮ ಪ್ರಮಾಣ. ವೇದಗಳಲ್ಲಿ ಹೇಳಿರುವ ಸತ್ಯಗಳೂ, ಸಾಕ್ಷಾತ್ಕಾರ ಪಡೆದ ಮಹಾತ್ಮರ ಮಾತುಗಳೂ ಅಂತಿಮ ಸತ್ಯದ ವಿಚಾರದಲ್ಲಿ ಒಂದಕ್ಕೊಂದು ಹೊಂದಿಕೆಯಾಗುತ್ತವೆ; ಆದ್ದರಿಂದ ಅವೆರಡನ್ನು 'ಶಬ್ದ' ಪ್ರಮಾಣವೆನ್ನಲಾಗಿದೆ. ನೇರ ಅನುಭವ ಪಡೆದವರ ಮಾತೇ ಅಂತಿಮ ಪ್ರಮಾಣ ಎಂಬುದು ಭಾರತೀಯ ದರ್ಶನ ಪರಂಪರೆಗಳ ದೃಢವಾದ ನಂಬಿಕೆ. ಆದರೆ, ಶಬ್ದ ಪ್ರಮಾಣಕ್ಕೆ ಹೊಂದಿಕೆಯಾಗುವ, ಅದನ್ನು ಅನುಸರಿಸುವ ಉಳಿದ ಪ್ರಮಾಣಗಳನ್ನು ಕೂಡ ಸ್ವೀಕರಿಸಬಹುದು ಎಂಬ ಅಂಶವೂ ಗಮನಾರ್ಹ.

ನ್ಯಾಯ, ತರ್ಕ ಹಾಗೂ ತತ್ತ್ವ-ಸಿದ್ಧಾಂತಗಳ ದೃಷ್ಟಿಕೋನದಿಂದ ಆಧ್ಯಾತ್ಮಿಕ ಅನುಭವ, ಸಾಕ್ಷಾತ್ಕಾರಗಳ ವಿಚಾರವಾಗಿ ತಳೆಯುವ ಅಭಿಪ್ರಾಯಗಳು ಒಂದೆಡೆ; ಇವೆಲ್ಲವುಗಳಾಚೆಗೆ ಅನೇಕ ಮಂದಿ ಸಾಧಕರು, ಸಂತರು ಅಥವಾ ಸಮಾಜದ ವಿವಿಧ ಸ್ತರಗಳಲ್ಲಿನ ಜನಸಾಮಾನ್ಯರು ತಮ್ಮತಮ್ಮ ಅರಿವಿಗೆ, ಆಸಕ್ತಿಗೆ ಅನುಗುಣವಾಗಿ ಸಾಧನೆ ಮಾಡುತ್ತಾರೆ, ಅದು ಇನ್ನೊಂದೆಡೆ. ಸಾಕ್ಷಾತ್ಕಾರ ಯಾರೊಬ್ಬನ ಸೊತ್ತೂ ಅಲ್ಲ; ಯೋಗ್ಯ ಸಾಧಕನಿಗೆ — ಅವನು ಯಾವುದೇ ಹಂತದಲ್ಲಿರಲಿ, ಸಮಾಜದ ಯಾವುದೇ ಶ್ರೇಣಿಯಲ್ಲಿರಲಿ, ಅವನು ಸಾಕ್ಷಾತ್ಕಾರಕ್ಕೆ ಅರ್ಹನಾದಾಗ ಆ ದಿವ್ಯ ಅನುಭವ ಅವನದಾಗುತ್ತದೆ. ನಮ್ಮ ದೇಶದ ಇತಿಹಾಸದಲ್ಲಿ ಆಗಿ ಹೋಗಿರುವ ಸಾಧು-ಸಂತರಲ್ಲಿ ಅನೇಕರು ಅತ್ಯಂತ ಕೆಳವರ್ಗದ ಸಮುದಾಯದಿಂದ ಬಂದವರು. ಹಲವು ಬಾರಿ ತುಂಬಾ ಧರ್ಮ, ಸಂಸ್ಕೃತಿ, ತತ್ತ್ವಶಾಸ್ತ್ರಗಳನ್ನು ಅಧ್ಯಯನ ಮಾಡಿದವರು ಆಧ್ಯಾತ್ಮಿಕವಾಗಿ ಏನನ್ನೂ ಗಳಿಸಿರುವುದಿಲ್ಲ; ಕೇವಲ ಒಣಪಂಡಿತರಾಗಿರುತ್ತಾರೆ. ಈ ವೈರುಧ್ಯಗಳ ನಡುವೆಯೇ ಒಬ್ಬೊಬ್ಬ ವ್ಯಕ್ತಿ ತಮ್ಮ ತಮ್ಮ ಆಧ್ಯಾತ್ಮಿಕ ಆದರ್ಶವನ್ನು ಕಂಡುಕೊಳ್ಳಬೇಕಾಗಿದೆ.

### ಸಾಕ್ಷಾತ್ಕಾರದ ಅನುಭವ : ವಿವಿಧ ವಿವರಣೆಗಳು

ಎಷ್ಟು ಜನ ಸಾಧಕರು ಸಾಕ್ಷಾತ್ಕಾರ ಪಡೆದರೋ, ಅಷ್ಟೂ ಜನರ ಅನುಭವಗಳು ಒಂದಕ್ಕಿಂತ ಇನ್ನೊಂದು ಭಿನ್ನವಾಗಿರುತ್ತವೆ. ಅವರು ಹೇಳುವ ವಿವರಗಳಿಂದ ಈ ಭಿನ್ನತೆಗಳನ್ನು ನಾವು ಅರಿತುಕೊಳ್ಳಬಹುದು. ವೇದಾಂತದಲ್ಲಿ ಹೇಳುವ 'ಜೀವನ್ಮುಕ್ತ'ನ ಅವಸ್ಥೆ ಒಂದು ರೀತಿ, ಬೌದ್ಧರ 'ನಿರ್ವಾಣ' ಇನ್ನೊಂದು ಬಗೆ; ಯೋಗಸೂತ್ರಗಳಲ್ಲಿ ಹೇಳುವ 'ಅಸಂಪ್ರಜ್ಞಾತ ಸಮಾಧಿ'ಯ ವಿವರಣೆ ಇನ್ನೊಂದು ರೀತಿ. ಆದರೆ ಈ ಅನುಭವಗಳಲ್ಲಿ ಸಾಮ್ಯತೆಯಿದೆಯೋ, ವ್ಯತ್ಯಾಸವಿದೆಯೋ, ಹೇಳುವವರಾರು? ಶ್ರೀರಾಮಕೃಷ್ಣರು ಹೇಳುತ್ತಿದ್ದ ಒಂದು ಕಥೆ ಇಲ್ಲಿ ನೆನಪಾಗುತ್ತದೆ: ಉಪ್ಪಿನ ಬೊಂಬೆಯೊಂದು ಸಮುದ್ರವನ್ನು ಅಳೆಯಲು ಹೋಯಿತು. ಸಮುದ್ರದಲ್ಲಿ ಇಳಿಯುತ್ತಲೇ ಅದು ಕರಗಿ ಹೋಯಿತು. ಕ್ರಮೇಣ ಸಮುದ್ರದಲ್ಲಿ ಒಂದಾಯಿತು. ಇನ್ನು ಸಮುದ್ರದ ಆಳವೆಷ್ಟು ಎಂಬುದನ್ನು ಹೇಳುವವರಾರು? ಸಾಧಕನ ಪರಿಸ್ಥಿತಿ ಕೂಡ ಇದೇ ರೀತಿ — ಎನ್ನುತ್ತಾರೆ. ಸ್ವತಃ ಸಾಕ್ಷಾತ್ಕಾರ ಪಡೆದವನಿಗಷ್ಟೇ ಅವನ ಅನುಭವ ಯಾವ ರೀತಿಯದು, ಯಾವ ಹಂತದ್ದು ಎಂಬುದು ತಿಳಿಯಬಹುದು. ಅವನಿಂದ ಹೊರಬಿದ್ದ ಮಾತುಗಳನ್ನು ಅವಲಂಬಿಸಿ ಮಾತ್ರವೇ ಉಳಿದವರು ಅವನ ಅನುಭವ ಎಂಥದು ಎಂಬುದನ್ನು ಊಹಿಸಿ ತಿಳಿಯಬೇಕು. ಆದ್ದರಿಂದ, ಸಂತರೆಲ್ಲರ ಅನುಭವಗಳೆಲ್ಲ ಒಂದೇ ಎಂದಾಗಲಿ, ವೈವಿಧ್ಯಮಯ ಎಂದಾಗಲಿ ಸಾಮಾನ್ಯರು ತಿಳಿಯಲಾರರು; ಆದರೆ ಅಂತಹ ಅನುಭವ ಪಡೆದವರೇ ಈ ವಿಷಯವಾಗಿ ಹೇಳುವ ಮಾತುಗಳನ್ನು ಗಮನಿಸಬಹುದು.

೧) ಶ್ರೀರಾಮಕೃಷ್ಣರು ಹೇಳುವಂತೆ, 'ಎಲ್ಲ ನರಿಗಳೂ ಒಂದೇ ರೀತಿ ಊಳಿಡುತ್ತವೆ' ; ಎಂದರೆ, ಮಹಾತ್ಮರುಗಳಿಗೆ ಆಗುವ ಅನುಭವಗಳಲ್ಲಿ ಸಮಾನ ಅಂಶಗಳಿವೆ. ಸಾಧಕನ ಹಂತಕ್ಕನುಗುಣವಾಗಿ ಆಧ್ಯಾತ್ಮಿಕ ಅನುಭೂತಿಗಳೂ ವಿವಿಧ ಹಂತದ್ದಾಗಿರಬಹುದು; ಆದರೆ ಎಲ್ಲ ಸಾಧಕರ ಅನುಭವಗಳೂ ಒಂದೇ ಭಗವಂತನನ್ನು ಕುರಿತಾದದ್ದು; ಹಾಗಾಗಿ ಅದರಲ್ಲಿ ಸಾಮ್ಯತೆಯಿರುವುದು ಸಹಜ.

೨) ಸ್ವಾಮಿ ಶಾರದಾನಂದರು 'ಶ್ರೀರಾಮಕೃಷ್ಣ ಲೀಲಾಪ್ರಸಂಗ'ದಲ್ಲಿ ತಿಳಿಸಿರುವಂತೆ, ಸಾಧಕರಲ್ಲಿ ಎಷ್ಟು ಬಗೆಯ ಭಿನ್ನತೆ, ವಿವಿಧ ಹಂತಗಳು ಇವೆಯೋ ಅದೇ ರೀತಿ ಅವರ ಅನುಭವಗಳಲ್ಲೂ ವಿವಿಧ ಹಂತಗಳಿವೆ; ವೈವಿಧ್ಯತೆಗಳಿವೆ. ಸಾಮಾನ್ಯ ಸಾಧಕರ, ಈಶ್ವರಕೋಟಿಗಳ, ಅವತಾರಪುರುಷರ ಯೋಗಿಗಳ, ಹಾಗೂ ಭಕ್ತರುಗಳ ಅನುಭವಗಳಲ್ಲಿ ವೈವಿಧ್ಯತೆಯಿದೆ, ವ್ಯತ್ಯಾಸವಿದೆ.

ಮೇಲ್ನೋಟಕ್ಕೆ ವಿರುದ್ಧವೆನಿಸಬಹುದಾದ ಈ ಎರಡು ಅಭಿಪ್ರಾಯಗಳಲ್ಲೂ ನಾವು ಗಮನಿಸಬೇಕಾದ ಸಂಗತಿಯಿದು: ಇಂದ್ರಿಯಾತೀತವಾದ ಅನುಭವಗಳನ್ನು ಕುರಿತು ಹೇಳಿರುವ ಹತ್ತು ಹಲವು ಅಭಿಪ್ರಾಯಗಳನ್ನೂ ನಾವು ಮಾನ್ಯ ಮಾಡಬೇಕಾಗುತ್ತದೆ. ಅನುಭೂತಿ ಪಡೆದ ವ್ಯಕ್ತಿ ಸಾಮಾನ್ಯ ಹಂತದಲ್ಲಿ ನಿಂತುಕೊಂಡು ಅವುಗಳನ್ನು ವಿವರಿಸುತ್ತಾನೆ. ಆಗ ಕಾಲ, ದೇಶ, ಸನ್ನಿವೇಶ, ವಿವರಿಸುವ ವ್ಯಕ್ತಿಯ ಮನೋಭಾವನೆ, ಭಾಷೆ, ಸಂವಹನ ರೀತಿ — ಇತ್ಯಾದಿ ಹಲವು ಅಂಶಗಳನ್ನು ಅನುಸರಿಸಿ ಆ ವಿವ ರಣೆಗಳಲ್ಲಿ ಭಿನ್ನತೆ ಕಂಡುಬರಬಹುದು. ಆದರೆ ಎಲ್ಲ ವಿವರಣೆ ಗಳಲ್ಲೂ ಸಮಾನವಾಗಿ ಕಾಣಬಹುದಾದ ಕೆಲವು ಸಂಗತಿಗಳನ್ನು ಗಮನಿಸುವುದೂ ಸಾಧ್ಯವಿದೆ. ಕಾರಣ, ಎಲ್ಲ ಅನುಭವಗಳೂ ಒಂದೇ ಸತ್ಯವನ್ನು, ಒಂದೇ ಭಗವಂತನನ್ನು ಕುರಿತಾಗಿ ಆದಂತ ಹವು. ಈ ಎರಡನ್ನೂ ಗಮನದಲ್ಲಿಟ್ಟುಕೊಂಡು ಈ ಆಧ್ಯಾತ್ಮಿಕ ಅನುಭವಗಳನ್ನು ನಾವು ಅರ್ಥೈಸಿಕೊಳ್ಳಬೇಕಾಗಿದೆ.

## ಪ್ರಪಂಚದ ಇತಿಹಾಸ ಹಾಗೂ ಏರುಪೇರುಗಳು : ಧರ್ಮದ ಸ್ಥಾನವೆಲ್ಲಿ?

ಮೇಲಿನ ವಿಚಾರದಿಂದ ಸ್ಪಷ್ಟವಾಗುವ ಅಂಶವೇನೆಂದರೆ, ವೈಯಕ್ತಿಕ ಅನುಭವದ ನೆಲೆಯಲ್ಲಿ ಉಂಟಾಗುವ ಸಾಕ್ಷಾತ್ಕಾರದ ಅನುಭವವು ಒಂದಲ್ಲ ಒಂದು ರೀತಿಯಲ್ಲಿ ಸಾರ್ವತ್ರಿಕ ಆಹ್ವಾನವನ್ನು ಹೊತ್ತುಕೊಂಡೇ ಪ್ರಪಂಚದಲ್ಲಿ ವ್ಯಾಪಕಗೊಳ್ಳುತ್ತದೆ. ಒಬ್ಬ ಬುದ್ಧ ಅನೇಕ ವರ್ಷಗಳ ಸಾಧನೆಯಿಂದ ಬೆಳಕನ್ನು ಕಂಡ. ಆದರೆ ಅವನ ಅನುಭವ ಅವನಲ್ಲೇ ಕೊನೆಗೊಳ್ಳಲಿಲ್ಲ. ಅವನಿಂದ ಹೊರಟ ಬೆಳಕು ಜಗತ್ತನ್ನೆಲ್ಲ ವ್ಯಾಪಿಸಿತು. ಜಗತ್ತಿನ ಎಲ್ಲ ಸಂಕಟ, ಗೊಂದಲ ಹಾಗೂ ಏರುಪೇರುಗಳಿಗೆ ಪರಿಹಾರ ಇಲ್ಲಿದೆ ಎಂದು ಅವನು ಸಾರಿದ. ಇದೇ ರೀತಿ ಜಗತ್ತಿನ ಎಲ್ಲೆಡೆ ಕೃಷ್ಣ, ಏಸುಕ್ರಿಸ್ತ, ಪೈಗಂಬರ, ಗುರುನಾನಕ್, ಚೈತನ್ಯ, ರಮಣಮಹರ್ಷಿ, ರಾಮಕೃಷ್ಣ-ವಿವೇಕಾನಂದರು ಆಧ್ಯಾತ್ಮಿಕ ಬೆಳಕನ್ನು ಬೀರುತ್ತಾರೆ, ಸಾಕ್ಷಾತ್ಕಾರದತ್ತ ಜನರನ್ನು ಕರೆದೊಯ್ಯುತ್ತಾರೆ. ಜೀವನದ ನಶ್ವರತೆ, ದುಃಖ, ಸಂಕಟಗಳು, ಮೃತ್ಯುವಿನ ಅಭೇದ್ಯ ರಹಸ್ಯ , ಜೀವನದ ಸಂಕೀರ್ಣ ಸಮಸ್ಯೆಗಳು ಮತ್ತೆ ಮತ್ತೆ ಮಾನವನನ್ನು ಕಾಡಿವೆ. ಶಾಶ್ವತವಾದ ಶಾಂತಿ, ನೆಮ್ಮದಿ, ಆನಂದಗಳು ಎಲ್ಲಾದರೂ ಇವೆಯೇ ಎಂದು ಅರಸುವಂತೆ ಮಾಡಿದೆ. ಈ ಎಲ್ಲ ಅನ್ವೇಷಣೆಗಳೂ ಬಾಹ್ಯಜಗತ್ತಿನಲ್ಲಿ ವಿಫಲವಾಗಿವೆ; ಈ ಪ್ರಪಂಚವನ್ನು ಮೀರಿ ಹೋಗುವಂತೆ ಮಾಡಿದೆ. ಉಪನಿಷತ್ತು ಹೇಳುವಂತೆ ಕೆಲವೇ ಮಂದಿ 'ಧೀರ'ರು ಮಾತ್ರ ಸತ್ಯವನ್ನರಿತಿದ್ದಾರೆ; ಏಕೆಂದರೆ ಅವರು ಸತ್ಯವನ್ನು ಕಂಡುಕೊಳ್ಳಲು ಎಲ್ಲವನ್ನೂ ತ್ಯಜಿಸಿರುತ್ತಾರೆ, ಏಕೈಕ ಗುರಿಯನ್ನು ಹೊಂದಿ ಸತತ ಪ್ರಯತ್ನ ಮಾಡಿರುತ್ತಾರೆ. ಶ್ರೀರಾಮಕೃಷ್ಣರಂತೆ ಕೆಲವರು ತಮ್ಮ ಪ್ರಾಣವನ್ನೇ ಪಣವಾಗಿಟ್ಟುಕೊಂಡು ಸಾಧನೆ ಮಾಡುತ್ತಾರೆ. ಅದರ ಫಲವಾಗಿ ಅವರು ಪಡೆದ ಸಾಕ್ಷಾತ್ಕಾರದ ಅನುಭವ ಇಡೀ ಮನುಕುಲಕ್ಕೆ ಒಂದು ಹೊಸ ಬೆಳಕನ್ನು ನೀಡುತ್ತದೆ; ಬಹು ವ್ಯಾಪಕವಾಗಿಯೂ, ದೀರ್ಘಕಾಲಿಕವಾಗಿಯೂ ಅದು ಪ್ರಭಾವ ಬೀರುತ್ತದೆ.

ಹೀಗಿದ್ದೂ, ಇದಕ್ಕೆ ಸ್ಪಂದಿಸದ, ಭೌತಿಕತೆಗೇ ಅಂಟಿಕೊಂಡ ಮನಃಸ್ಥಿತಿಯ ಜನರ ಒಂದು ವರ್ಗ ಎಲ್ಲ ಕಾಲಕ್ಕೂ ಇರುತ್ತದೆ. ಕಾಣುವ ಪ್ರಪಂಚವೊಂದೇ ಸತ್ಯ ಹಾಗೂ ಇಂದ್ರಿಯ ಗ್ರಹಿಕೆಗೆ ದಕ್ಕುವ ವಿಷಯಗಳು ಮಾತ್ರವೇ ವಾಸ್ತವ ಎಂಬ ನಿಲುವನ್ನು ತಾಳಿ, ಪ್ರಾಪಂಚಿಕ ಜೀವನದಾಚೆಗೆ ಸಾಗುವ ಪ್ರಯತ್ನವನ್ನೇ ಅವರು ಮಾಡಲಾರರು. ಹಲವು ಬಾರಿ ಅವರು ಧಾರ್ಮಿಕ, ಆಧ್ಯಾತ್ಮಿಕ ವಿಚಾರಗಳನ್ನು ಮತ್ತು ಸಾಕ್ಷಾತ್ಕಾರದ ಅನುಭವಗಳನ್ನು ಪ್ರಶ್ನಿಸುತ್ತಾರೆ, ತರ್ಕ ಮಾಡುತ್ತಾರೆ. ಆಧ್ಯಾತ್ಮಿಕ ದೃಷ್ಟಿಕೋನದವರ ಪಾಲಿಗೆ ತಮ್ಮ ನಂಬಿಕೆಯೇ ಸತ್ಯವೆನಿಸುತ್ತದೆ; ಪ್ರಾಪಂಚಿಕ ದೃಷ್ಟಿಯವರಿಗೆ ತಮ್ಮ ನಂಬಿಕೆಯೇ ಸತ್ಯವಾಗುತ್ತದೆ. ಈ ಎರಡೂ ದೃಷ್ಟಿಕೋನಗಳು ಸಮಾನಾಂತರವಾಗಿ ಸಾಗುತ್ತವೆ. ಇಬ್ಬರಿಗೂ ಒಂದು ಮಾನದಂಡವೆಂಬುದು ಇಲ್ಲವಾಗುತ್ತದೆ; ಇದೊಂದು ಬಗೆಯ ವಿಚಿತ್ರವಾದ ವೈರುಧ್ಯವೆನ್ನಬೇಕು.

## ಸ್ವಾಮಿ ವಿವೇಕಾನಂದರ ಹೊಸ ದೃಷ್ಟಿಕೋನ

ಆಧುನಿಕ ಜಗತ್ತಿನ ಹೊಸ ಆವಿಷ್ಕಾರಗಳು ಅತ್ಯಂತ ವೇಗವಾಗಿ ಜಗತ್ತೆಲ್ಲವನ್ನೂ ವ್ಯಾಪಿಸುತ್ತಿದ್ದ ಸನ್ನಿವೇಶದಲ್ಲಿ ಮೂಡಿಬಂದ ಉಜ್ವಲ ಬೆಳಕೇ ಸ್ವಾಮೀಜಿ. ಪ್ರಶ್ನಿಸುವ ಮನೋಧರ್ಮದಿಂದಲೇ ಅವರು ಧರ್ಮ-ಆಧ್ಯಾತ್ಮಿಕ ಜೀವನವನ್ನು ಪ್ರವೇಶಿಸಿದರು. ''ಸ್ವಾಮಿ, ನೀವು ದೇವರನ್ನು ನೋಡಿದ್ದೀರಾ?'' ಎಂಬ ನೇರ ಪ್ರಶ್ನೆ, ವಿಚಾರವಾದ, ತರ್ಕ ಹಾಗೂ ಪ್ರಚಂಡ ಸತ್ಯಾನ್ವೇಷಣೆಯ ಪ್ರವೃತ್ತಿ ಅವರನ್ನು ಶ್ರೀರಾಮಕೃಷ್ಣರೆಡೆಗೆ ಕರೆತಂದಿತು. ಅವರಿಬ್ಬರ ನಡುವೆ ನಡೆದ ಮುಖಾಮುಖಿ ಎರಡು ಪ್ರಪಂಚಗಳ ಸಂಘಟ್ಟನೆಯೆನ್ನಬೇಕು. ಒಂದೆಡೆ ಸನಾತನ

ಧರ್ಮದ ದಿವ್ಯ ಪ್ರತಿನಿಧಿಯಾದ ಋಷಿಸದೃಶ ವ್ಯಕ್ತಿ — ಶ್ರೀರಾಮಕೃಷ್ಣರು; ಇನ್ನೊಂದೆಡೆ ಆಧುನಿಕ ವಿದ್ಯಾಭ್ಯಾಸ ಪಡೆದ, ವೈಜ್ಞಾನಿಕ ಪ್ರವೃತ್ತಿಯ ನಿರ್ಭೀತ ಯುವಕ — ನರೇಂದ್ರ. ಇವರ ನಡುವೆ ನಡೆದ ತಾರ್ಕಿಕ, ಬೌದ್ಧಿಕ ಹಾಗೂ ಅಲೌಕಿಕ ಸಂಘರ್ಷ ಕೊನೆಗೊಂಡುದು ಅಭೂತಪೂರ್ವ ಗುರು-ಶಿಷ್ಯರ ಸಮಾಗಮದಲ್ಲಿ. ಈ ಹಿನ್ನೆಲೆಯಲ್ಲಿ ಸಾಧನೆ ಮಾಡಿ ಸತ್ಯದ ಸಾಕ್ಷಾತ್ಕಾರ ಮಾಡಿಕೊಂಡ ಸ್ವಾಮೀಜಿ ಗುರುದೇವನ ನಿತ್ಯನೂತನ ಸಂದೇಶವನ್ನು ಸಮಸ್ತ ಜಗತ್ತಿನ ಮುಂದೆ ನಿಂತು ಸಾರಿದರು.

ಸ್ವಾಮೀಜಿ ಹೊಸ ತತ್ತ್ವವನ್ನೇನೂ ಹೇಳಲಿಲ್ಲ; ಅದೇ ಸನಾತನ ತತ್ತ್ವ, ಧರ್ಮ, ಆಧ್ಯಾತ್ಮಿಕ ಸತ್ಯಗಳನ್ನು ಹೊಸ ಭಾಷೆಯಲ್ಲಿ ಹೇಳಿದರು. ವೈಜ್ಞಾನಿಕ ದೃಷ್ಟಿಯಿಂದಲೂ ಧರ್ಮವನ್ನು ವಿಶ್ಲೇಷಿಸಬಹುದು ಎಂಬುದನ್ನು ಪ್ರಪಂಚದಲ್ಲಿ ಮೊದಲ ಬಾರಿಗೆ ಸಾರಿದವರೇ ಸ್ವಾಮೀಜಿ. ವೈಜ್ಞಾನಿಕ ಪರೀಕ್ಷೆಯ ಮೂಸೆಯಲ್ಲಿ ಕೂಡ ಧರ್ಮ-ಆಧ್ಯಾತ್ಮಿಕತೆ ಉಜ್ವಲವಾಗಿ ಬೆಳಗುವ ಚಿನ್ನವಾಗಬಲ್ಲದು ಎಂಬುದನ್ನು ಸ್ವಾಮೀಜಿ ಸ್ವತಃ ತಮ್ಮ ಜೀವನದ ಮೂಲಕ ತೋರಿಸಿಕೊಟ್ಟರು. ಅವರ 'ರಾಜಯೋಗ', 'ಜ್ಞಾನಯೋಗ' ಹಾಗೂ ಇತರ ಗ್ರಂಥಗಳಲ್ಲಿ (ಮೂಲತಃ ಇವೆಲ್ಲ ಉಪನ್ಯಾಸಗಳು) ಇಂತಹದೇ ವೈಜ್ಞಾನಿಕ ದೃಷ್ಟಿಯ ವಿವರಣೆಯನ್ನು ನಾವು ಕಾಣಬಹುದು. ಆಧುನಿಕ ರೀತಿಯ ವಿದ್ಯಾಭ್ಯಾಸವನ್ನು ಪಡೆದ ಯುವಜನತೆ ಹೆಚ್ಚು ಆಕರ್ಷಿತರಾಗುವುದು ಕಣ್ಣಿಗೆ ಕಾಣುವ, ವಾಸ್ತವವಾದ ಜಗತ್ತಿನ ವಿಚಾರಗಳಿಂದ. ವೈಜ್ಞಾನಿಕ ವಿಚಾರಗಳು ಅವರನ್ನು ಹೆಚ್ಚು ಸೆಳೆಯಲು ಕಾರಣ, ಆಧುನಿಕ ಮನೋಭಾವವು ಹೊಂದಿರುವ ಪ್ರಯೋಗಶೀಲತೆಯಿಂದಾಗಿ. ಇದೇ ವಿಧಾನವನ್ನು ನಮ್ಮ ಸನಾತನಧರ್ಮ, ಅಧ್ಯಾತ್ಮಗಳಿಗೂ ಅನ್ವಯಿಸುವ ಮೂಲಕ, ಧರ್ಮವೂ ಒಂದು ವಿಜ್ಞಾನವೇ ಆಗಿದೆ ಎಂಬುದನ್ನು ಭಾರತದ ಯುವಪೀಳಿಗೆಗೆ ಮನವರಿಕೆ ಮಾಡಿಕೊಡಬಹುದೆಂದೂ, ಇದರಿಂದ ಆತ್ಮೋದ್ಧಾರ ಹಾಗೂ ದೇಶದ ಉನ್ನತಿ ಎರಡೂ ಸಾಧ್ಯವಾಗುವುದೆಂದೂ ಸ್ವಾಮೀಜಿ ಮನಗಂಡರು. ಸ್ವಾಮೀಜಿಯವರ ಈ ಹೊಸ ದೃಷ್ಟಿಕೋನದಿಂದ ಪ್ರಪಂಚಕ್ಕೆ, ಅದರಲ್ಲೂ ಭಾರತಕ್ಕೆ ಉಂಟಾದ ಲಾಭ ಅಪಾರವಾದದ್ದು; ಹಲವು ಯುಗಗಳವರೆಗೂ ಅದು ಪ್ರಭಾವಶಾಲಿಯಾಗಿ ಪ್ರೇರಣೆ ನೀಡುವಂಥದು. ನೂತನ ರಾಷ್ಟ್ರೀಯ ಭಾವನೆ, ಆಧ್ಯಾತ್ಮಿಕ ಜಾಗೃತಿ, ವೈಜ್ಞಾನಿಕ ಮನೋಭಾವ, ಯುವಶಕ್ತಿಯ ಮುನ್ನಡೆ ಎಲ್ಲವೂ ಇದರಿಂದ ಸಾಧ್ಯವಾಯಿತು.

### ಸಾಕ್ಷಾತ್ಕಾರ ಹಾಗೂ ಸಾರ್ಥಕ ಬದುಕು

ಪ್ರಪಂಚದಲ್ಲಿ ಎಲ್ಲರೂ ತಮ್ಮ ತಮ್ಮ ಗುರಿಯಾಗಿಟ್ಟುಕೊಳ್ಳುವ ಸಣ್ಣ ಸಣ್ಣ ಧ್ಯೇಯ-ಆದರ್ಶಗಳು ಆಯಾ ಕ್ಷೇತ್ರದಲ್ಲಿ ಮಾತ್ರ ಶ್ರೇಷ್ಠತೆಯನ್ನು ತಂದುಕೊಡಬಲ್ಲವು. ಉದಾಹರಣೆಗೆ: ಉತ್ತಮ ಡಾಕ್ಟರ್ ಆಗಿ ಹೆಸರು, ಸಂಪತ್ತು ಗಳಿಸುವ ಗುರಿ ಹೊಂದಿರುವ ವ್ಯಕ್ತಿ ವೈದ್ಯರ ವಲಯದಲ್ಲಿ ಮಾತ್ರ ಶ್ರೇಷ್ಠನಾಗುತ್ತಾನೆ. ಇದೇ ರೀತಿ ಇಂಜಿನಿಯರ್, ಅಧ್ಯಾಪಕ, ವಿಜ್ಞಾನಿ, ಸಮಾಜ ಸೇವಕ ಇತ್ಯಾದಿ. ಅದು ಒಟ್ಟು ಮಾನವನ ಗುರಿ-ಆದರ್ಶ ಆಗಬಲ್ಲುದೆ? ಈ ದೃಷ್ಟಿಯಿಂದ ನೋಡಿದರೆ, ಎಲ್ಲರಿಗೂ ಬೇಕಾದ, ಎಲ್ಲರೂ ಹೊಂದಬಹುದಾದ ಹಾಗೂ ಎಲ್ಲರೂ ಕಂಡುಕೊಳ್ಳಬೇಕಾದ ಧ್ಯೇಯ-ಆದರ್ಶಗಳಿಲ್ಲವೆ? ಇದ್ದರೆ ಅದು ಯಾವುದು?

ಹೀಗೆ ಚಿಂತಿಸುವಾಗ, ಒಟ್ಟು ಮನುಕುಲವನ್ನು ಗಮನದಲ್ಲಿ ಇಟ್ಟುಕೊಳ್ಳಬೇಕಾಗುತ್ತದೆ. ನಾನು ಎತ್ತರಕ್ಕೆ ಹೋದಂತೆಲ್ಲ ಇನ್ನೊಬ್ಬ ಅವನತಿ ಹೊಂದಿದರೆ ಅದು ನನ್ನ ಶ್ರೇಷ್ಠತೆಯಾಗುವುದೆ? ನನ್ನ ಹಿತ ಎಷ್ಟು ಮುಖ್ಯವೋ ಇತರರ ಹಿತವೂ ಅಷ್ಟೇ ಮುಖ್ಯ ಎಂಬುದು ಸಾರ್ವತ್ರಿಕವಾದ, ಎಲ್ಲ ಕಾಲಕ್ಕೆ ಹಾಗೂ ಎಲ್ಲ ಜನ ರಿಗೆ ಒಪ್ಪಿಗೆಯಾಗುವ ಮೌಲ್ಯ. ಹೀಗೆ ಎಲ್ಲರ ಒಳಿತಿನಲ್ಲಿ ತನ್ನ ಒಳಿತನ್ನು ಸಾಧಿಸಲು ಸಾಧ್ಯವಾಗುವುದು ಒಬ್ಬ ವ್ಯಕ್ತಿ ಸುಭದ್ರ ವಾದ ನೈತಿಕ ನೆಲೆಗಟ್ಟಿನ ಮೇಲೆ ತನ್ನ ಜೀವನವನ್ನು ರೂಪಿಸಿ ಕೊಂಡಾಗ ಮಾತ್ರ. ಈ ಬಗೆಯ ಸಂಸ್ಕಾರವನ್ನು ನೀಡುವುದು ಸಂಸ್ಕೃತಿ; ಸಂಸ್ಕೃತಿಯ ಜೀವಾಳವಾದ ಧರ್ಮ-ಆಧ್ಯಾತ್ಮಿಕತೆ.

ಜೀವನ ಸಾರ್ಥಕಗೊಳ್ಳುವುದು ಅಪಾರ ಸಂಪತ್ತನ್ನು ಕಲೆ ಹಾಕುವುದರಿಂದ ಅಲ್ಲ; ಹೆಸರು, ಕೀರ್ತಿ ಗಳಿಸುವುದರಿಂದ ಅಲ್ಲ; ನಾಯಕನೆನಿಸಿ ಮೆರೆಯುವುದರಿಂದಲೂ ಅಲ್ಲ. ಸುಂದರ ಹಾಗೂ ಶಾಂತವಾದ ರೀತಿಯಲ್ಲಿ ಕೌಟುಂಬಿಕ ಜೀವನದ ನೆಮ್ಮದಿಯನ್ನು ಪಡೆಯುವುದರಿಂದಲೂ ನಮ್ಮ ಬದುಕು ಸಂಪೂರ್ಣವಾಗಿ ಸಾರ್ಥಕವಾಗುವುದಿಲ್ಲ. ಒಂದು ದಿನ ಎಲ್ಲವನ್ನೂ ಬಿಟ್ಟು ಹೋಗಬೇಕಾದ ಸಂದರ್ಭದಲ್ಲಿ ಜೀವ 'ಗೋಳೋ' ಎಂದು ಅತ್ತುಬಿಡುವುದು. ಶಾಶ್ವತ ಸತ್ಯವನ್ನು ಅರಿಯುವ, ಆ ಸತ್ಯವನ್ನು ಅನುಭವ ಮಾಡಿಕೊಳ್ಳುವ ಮೂಲಕ ಮಾನವನು ಜನನ-ಮರಣಗಳಿಂದ ಕೂಡಿದ, ಸುಖದುಃಖಗಳಿಂದ ಕೂಡಿದ ಈ ಪ್ರಪಂಚದ ಎಲ್ಲ ಬಂಧನಗಳನ್ನೂ ದಾಟಬಲ್ಲ. ಹಾಗೆ ದಾಟಿದಾಗಲೇ ಅವನು ಮುಕ್ತನಾಗುವನು. ಇದೇ ಮುಕ್ತಿ, ಸಾಕ್ಷಾತ್ಕಾರ. ಪ್ರಾಚೀನ ಕಾಲದಿಂದಲೂ ಅನೇಕ ಮಂದಿ ಸಾಧು-ಸಂತರು, ಅವತಾರ ಪುರು

### ಆಗಸ್ಟ್ ತಿಂಗಳ ಕಾರ್ಯಕ್ರಮಗಳು

| | | |
|---|---|---|
| ೩ | ಸೋಮವಾರ | ಸ್ವಾಮಿ ನಿರಂಜನಾನಂದ ಜಯಂತಿ |
| ೧೨ | ಬುಧವಾರ | ಶ್ರೀಕೃಷ್ಣ ಜನ್ಮಾಷ್ಟಮಿ |
| ೧೫ | ಶನಿವಾರ | ಏಕಾದಶಿ |
| ೧೮ | ಮಂಗಳವಾರ | ಸ್ವಾಮಿ ಅದ್ವೈತಾನಂದ ಜಯಂತಿ |
| ೨೨ | ಶನಿವಾರ | ಶ್ರೀಗಣೇಶ ಚತುರ್ಥಿ |
| ೨೯ | ಶನಿವಾರ | ಏಕಾದಶಿ |